ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಮಹಿಳಾ ಕಾಲೇಜು
ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ
**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 2025-26ನೆಯ ಸಾಲಿನ ಸಾಂಸ್ಕೃತಿಕ & ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮ

**" ಸೋತವರ ಅನುಭವ ಹಾಗೂ ಗೆದ್ದವರ ಸಲಹೆ ಜೀವನಕ್ಕೆ ದಾರಿ ದೀಪವಾಗುತ್ತವೆ" – ಡಾ.ರೇಷ್ಮ ಚಂಗಪ್ಪ**

ಕೊಳ್ಳೇಗಾಲ 12 ಆಗಸ್ಟ್ 2025 ರಂದು ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ & ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರರಾದ ಟಿ.ನರಸೀಪುರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ರೇಷ್ಮ ಚಂಗಪ್ಪ ಅವರು ಮಾತನಾಡಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಾಮಾಣಿಕತೆಯಿಂದ ಜಯಗಳಿಸಬೇಕೆಂದರೆ ಸತತ ಅಭ್ಯಾಸ, ಪರಿಶ್ರಮ, ಗುರಿ ತಲುಪುವ ಆಸೆ ಹೊಂದಿರಬೇಕು. ಜೀವನದಲ್ಲಿ ಭಾಗವಹಿಸುವಿಕೆ ಮುಖ್ಯ. ಸೋಲು-ಗೆಲುವು ಇದ್ದೇ ಇರುತ್ತವೆ. ಸೋತವರ ಅನುಭವ, ಗೆದ್ದವರ ಸಲಹೆ ನಮ್ಮ ಜೀವನಕ್ಕೆ ದಾರಿದೀಪವಾಗುತ್ತವೆ. ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ ಸಮಾನತೆಯನ್ನು ಕಾಪಾಡಿಕೊಳ್ಳಬೇಕು. ಸಮಯವನ್ನು ಸದ್ವಿನಿಯೋಗ ಮಾಡಿಕೊಂಡು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಸಮಯದ ಸರಿಯಾದ ನಿರ್ವಹಣೆಯಿಂದ ಯಶಸ್ಸು ಸಾಧ್ಯ. ವಿದ್ಯೆ ಜೀವನದ ಬೆನ್ನೆಲುಬು. ದೃಢ ಸಂಕಲ್ಪ ಮಾಡಿ ಜಯಶಾಲಿಗಳಾಗಿ ಎಂದು ಹಾರೈಸಿದರು.

'ಕಮರೊಟ್ಟು ಚೆಕ್‌ಪೋಸ್ಟ್' ಚಲನಚಿತ್ರ ನಿರ್ದೇಶಕರಾದ ಶ್ರೀ.ಪರಮೇಶ್ ಎ ಅವರು ಉದ್ಘಾಟನೆಯನ್ನು ನೆರವೇರಿಸಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಹಾಗೂ ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿ ಇರಬೇಕು. ಗುರುವಿನ ಸ್ಮರಣೆಯನ್ನು ಮಾಡಿ ಗುರಿಯ ಕಡೆಗೆ ಸಾಗಿ ಯಶಸ್ಸು ಸಾಧ್ಯವೆಂದು ಹೇಳಿದರು.

ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಖ್ಯಾತ ನಟರಾದ ಸುಂದರಕೃಷ್ಣ ಅರಸು ಅವರ ಪುತ್ರರಾದ ಶ್ರೀ ನಾಗೇಂದ್ರ ಅರಸ್ ಅವರು ಮಾತನಾಡಿ ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳೆ ಶಕ್ತಿಶಾಲಿಗಳಾಗಿರುವುದು. ವಿದ್ಯಾರ್ಥಿಗಳಲ್ಲಿ ಶಿಸ್ತು ಸಂಯಮ ಮುಖ್ಯವಾಗಿರಬೇಕು. ಗುರುವಿದ್ದರೆ ಗುರಿ ಸಾಧ್ಯವಾಗುತ್ತದೆ. ಸಾಂಸ್ಕೃತಿಕ & ಕ್ರೀಡಾ ಚಟುವಟಿಕೆಗಳು ಜೀವನಕ್ಕೆ ಅತ್ಯವಶ್ಯಕವಾಗಿವೆ ಎಂದು ತಿಳಿಸಿದರು.

ಮತ್ತೋರ್ವ ಅತಿಥಿಗಳಾದ ಸಹನಿರ್ದೇಶಕ ಶ್ರೀ ರಾಜು ಅವರು ಮಾತನಾಡಿ ಜೀವನದಲ್ಲಿ ಆಸೆ ಮತ್ತು ಗುರಿ ದೃಢವಾಗಿರಬೇಕು, ಸಾಧನೆ ಮಾಡಬೇಕೆಂದರೆ ಹಿಂದೆ ಗುರು ಮುಂದೆ ಗುರಿ ಇರಬೇಕು ಎಂದು ತಿಳಿಸಿದರು.

ಚಲನಚಿತ್ರ ನಟರಾದ ಶ್ರೀ ಮಹೇಶ್ ಅವರು ಎಲ್ಲಾ ವಿದ್ಯಾರ್ಥಿಗಳು ಮೊಬೈಲ್‌ಗಳಿಂದ ದೂರವಿದ್ದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ ಎಂದು ಹಾರೈಸಿದರು.

ಚಲನಚಿತ್ರ ಸಹಾಯಕ ನಿರ್ದೇಶಕರಾದ ಶ್ರೀ ಆನಂದ್ ರಾಜ್ ಅವರು ಮಾತನಾಡಿ ಸತತ ಪರಿಶ್ರಮ ಹಾಗೂ ಸಾಮರ್ಥ್ಯದಿಂದ ಯಶಸ್ಸು ದೊರೆಯುತ್ತದೆ. ಗುರುವಿನ ಸ್ಥಾನ ದೊಡ್ಡದು, ನಮ್ಮ ಸಂಸ್ಕೃತಿಯಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ ಹೆಚ್.ಎಸ್. ಕೊಂಗಳಪ್ಪ ಅವರು ಮಾತನಾಡಿ ವಿದ್ಯಾರ್ಥಿಗಳ ಜೀವನದಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಮುಖ್ಯ. ವಿದ್ಯಾರ್ಥಿಗಳಲ್ಲಿ ಸಂಸ್ಕೃತಿಯನ್ನು ಬೆಳೆಸಬೇಕು. ಸಾಧನೆ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಸ್ ಶ್ರೀಧರ್‌ರವರು ಉಪಸ್ಥಿತರಿದ್ದರು.

ಮಧ್ಯಾಹ್ನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

2025–26ನೆಯ ಸಾಲಿನ ಸಾಂಸ್ಕೃತಿಕ & ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮ. ಚಿತ್ರದಲ್ಲಿ ಶ್ರೀಆನಂದರಾಜು, ಶ್ರೀ ನಾಗೇಂದ್ರ ಅರಸು, ಶ್ರೀ ಮಹೇಶ್, ಶ್ರೀ ಎ ಪರಮೇಶ ಪ್ರಾರ್ಚಾರಾದ ಡಾ.ಹೆಚ್.ಎಸ್. ಕೊಂಗಳಪ್ಪ, ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರರಾದ ಟಿ.ನರಸೀಪುರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ ರೇಷ್ಮ ಚಂಗಪ್ಪ, ಕ್ರೀಡಾ ವೇದಿಕೆ ಸಂಚಾಲಕರಾದ ಶ್ರೀ ಎಸ್ ಶ್ರೀಧರ್‌ರವರನ್ನು ಕಾಣಬಹುದು.



ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರರಾದ ಟಿ.ನರಸೀಪುರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ ರೇಷ್ಮ ಚಂಗಪ್ಪರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀಆನಂದರಾಜು, ಶ್ರೀ ನಾಗೇಂದ್ರ ಅರಸು, ಶ್ರೀ ಮಹೇಶ್, ಶ್ರೀ ಎಸ್ ಪರಮೇಶ ಪ್ರಾರ್ಚಾರಾದ ಡಾ.ಹೆಚ್.ಎಸ್.ಕೊಂಗಳಪ್ಪ, ಕ್ರೀಡಾ ವೇದಿಕೆ ಸಂಚಾಲಕರಾದ ಶ್ರೀ ಎಸ್ ಶ್ರೀಧರ್‌ರವರನ್ನು ಕಾಣಬಹುದು



ಪ್ರಜಾವಾಣಿ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಉದ್ಘಾಟನೆ

# ‘ಸತತ ಪರಿಶ್ರಮದಿಂದ ಯಶಸ್ಸು’

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ: ‘ಪ್ರಾಮಾಣಿಕತೆಯಿಂದ ಜಯ ಗಳಿಸಬೇಕಾದರೆ ಸತತ ಅಭ್ಯಾಸ, ಪರಿಶ್ರಮ ಹಾಗೂ ಗುರಿ ತಲುಪುವ ಆಸೆ ಹೊಂದಿರಬೇಕು’ ಎಂದು ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ, ಸಹ ಪ್ರಾಧ್ಯಾಪಕಿ ರೇಷ್ಮಾ ಚಂಗಪ್ಪ ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಮಂಗಳವಾರ ನಡೆದ 2025-26ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಮುಖ್ಯ, ಸೋಲು-ಗೆಲುವು ಇದ್ದೇ ಇರುತ್ತದೆ. ಸೋತವರ ಅನುಭವ, ಗೆದ್ದವರ ಸಲಹೆ ನಮ್ಮ ಜೀವನಕ್ಕೆ ದಾರಿ ದೀಪವಾಗುತ್ತವೆ. ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ ಸಮಾನತೆ ಕಾಪಾಡಿಕೊಳ್ಳಬೇಕು’ ಎಂದರು.




ಕೊಳ್ಳೇಗಾಲ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಮಂಗಳವಾರ ನಡೆದ 202526ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಸಹ ಪ್ರಾಧ್ಯಾಪಕಿ ಡಾ.ರೇಷ್ಮ ಚಂಗಪ್ಪ ಭಾಗವಹಿಸಿದ್ದರು

ಚಲನಚಿತ್ರ ನಿರ್ದೇಶಕ ಪರಮೇಶ್ ಮಾತನಾಡಿ, ‘ವಿದ್ಯಾ-ರ್ಥಿಗಳಿಗೆ ಸಾಂಸ್ಕೃತಿಕ ಹಾಗೂ ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿ ಇರಬೇಕು. ಗುರುವಿನ ಸ್ಮರಣೆಯನ್ನು ಮಾಡಿ ಗುರಿಯ ಕಡೆಗೆ ಸಾಗಿ ಯಶಸ್ಸು ಕಾಣಬೇಕು’ ಎಂದು ಹೇಳಿದರು.

ನಟ ನಾಗೇಂದ್ರ ಅರಸ್ ಮಾತನಾಡಿ, ‘ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ ಮುಖ್ಯವಾಗಿರಬೇಕು. ಗುರುವಿದ್ದರೆ ಗುರಿ ಸಾಧ್ಯವಾಗುತ್ತದೆ’ ಎಂದರು.

ಚಲನಚಿತ್ರ ಸಹನಿರ್ದೇಶಕ ರಾಜು, ನಟ ಮಹೇಶ, ಸಹಾಯಕ ನಿರ್ದೇಶಕ ಆನಂದ್ ರಾಜ್, ಪ್ರಾಚಾರ್ಯ ಡಾ.ಕೊಂಗಳಪ್ಪ, ದೈಹಿಕ ಶಿಕ್ಷಣ ನಿರ್ದೇಶಕ ಶ್ರೀಧರ್, ವಿದ್ಯಾರ್ಥಿಗಳು ಭಾಗವಹಿಸಿದ್ದರು.

[redacted]